ಕೌಟುಂಬಿಕ ದೌರ್ಜನ್ಯ — ಹೀಗೆ ಬೇರೆ ಬೇರೆ ವಿಭಾಗಗಳೂ ಇವೆ. ಈ ವಿಭಾಗಗಳು ಸ್ವತಂತ್ರವಾಗಿ ಅಧ್ಯಯನ ಮತ್ತು ವಿಶ್ಲೇಷಣೆಯನ್ನು ಮಾಡುತ್ತವೆ. ನಾನು ವರ್ಣಭೇದ ಅಥವಾ ಜನಾಂಗಿಯಭೇದದ ವಿಷಯಕ್ಕೆ ಸಂಬಂಧಿಸಿದಂತೆ ಕೆಲಸ ಮಾಡುತ್ತೇನೆ. ಈ ವಿಷಯಕ್ಕೆ ಸಂಬಂಧಿಸಿ ವಿಶ್ವಸಂಸ್ಥೆಯ ಕೆಲಸವನ್ನೂ ವಿಮರ್ಶೆ ಮಾಡಬಹುದು. ಜಗತ್ತಿನ ಯಾವುದೇ ಮೂಲೆಯಲ್ಲಿ ಜನಾಂಗೀಯಭೇದದಿಂದ ತೊಂದರೆ ಆದಲ್ಲಿ ವಿಶ್ವಸಂಸ್ಥೆಯ ಆಶಯವನ್ನು ಸಾಕಾರಗೊಳಿಸಲು ಆ ದೇಶದ ಸರ್ಕಾರಕ್ಕೆ ಪತ್ರವನ್ನು ಬರೆಯಬಹುದು. ಆಹ್ವಾನ ನೀಡಿದ ದೇಶಕ್ಕೆ ಭೇಟಿ ನೀಡಬಹುದು. ಸರ್ಕಾರ, ಇಲ್ಲವೇ ಸಂಘಸಂಸ್ಥೆಗಳು ಕರೆಯಬಹುದು. ಒಟ್ಟಾರೆ ಜಾಗತಿಕವಾಗಿ ವರ್ಣಭೇದ ನೀತಿಯನ್ನು ಅಧ್ಯಯನ ನಡೆಸಬೇಕಾಗುತ್ತದೆ.

◆ **ವಿಶ್ವಸಂಸ್ಥೆಯ ಜನಾಂಗೀಯಭೇದದ ಏಷ್ಯಾದ ಮೊದಲ ತಜ್ಞೆಯಾಗಿ ಭಾರತವನ್ನು ಹೇಗೆ ಪ್ರತಿನಿಧಿಸುವಿರಿ?**

ಭಾರತವನ್ನಾಗಲಿ, ವಿಶ್ವಸಂಸ್ಥೆಯನ್ನಾಗಲಿ ನಾನು ಪ್ರತಿನಿಧಿಸುವುದಿಲ್ಲ. ಸಂಪೂರ್ಣ ಸ್ವತಂತ್ರವಾಗಿಯೇ ಅಧ್ಯಯನ ಮಾಡುತ್ತೇನೆ. ವಿಶ್ವಸಂಸ್ಥೆಯಲ್ಲಿ ಏನಾದರೂ ಲೋಪ ಆಗಿದ್ದರೆ ಅದನ್ನೂ ಗುರುತಿಸಬಹುದು. ಜನಾಂಗೀಯಭೇದ ವಿಶ್ವದ ಎಲ್ಲೆಡೆ ಇದ್ದೇ ಇದೆ. ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಗಳು ಇದ್ದಾರೆ. ಅವರ ಜೊತೆ ಜನಾಂಗೀಯಭೇದ, ಜಾತಿಭೇದ, ಲಿಂಗಭೇದಕ್ಕೆ ಸಂಬಂಧಿಸಿದಂತೆ ಸಂವಾದ ನಡೆಸಲು ಅವಕಾಶ ಇದೆ. ವಿಷಯ ನನ್ನ ಅಧ್ಯಯನ ವ್ಯಾಪ್ತಿಗೆ ಬರಬೇಕು.

◆ **ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧ ನಡೆಯುತ್ತಿದೆ. ಅದು ವಿಶ್ವಸಂಸ್ಥೆಯ ಆಶಯಕ್ಕೆ ವಿರುದ್ಧ. ಹೀಗಿರುವಾಗ ಒಂದು ದೇಶದೊಳಗಿನ ಜನಾಂಗೀಯಭೇದ ನಿಯಂತ್ರಿಸುವ ಸಾಧ್ಯತೆ ಎಷ್ಟರ ಮಟ್ಟಿಗೆ ಪ್ರಾಯೋಗಿಕ?**

ವಿಶ್ವಸಂಸ್ಥೆ ಸುಪ್ರೀಂ ಕೋರ್ಟ್ ರೀತಿ ಅಲ್ಲ. ದೇಶದೊಳಗೆ ಕಲಹ ನಡೆದರೆ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶ ಮಾಡಿ ಸಲಹೆ ನೀಡಬಹುದು ಇಲ್ಲವೇ ಆದೇಶವನ್ನೇ ನೀಡಬಹುದು. ವಿಶ್ವಸಂಸ್ಥೆಗೆ ಅದರದ್ದೇ ಆದ ಮಿತಿ ಇದೆ. ಜನಾಂಗಿಯಭೇದ ವಿರೋಧ ನೀತಿಗೆ ಬೇರೆ ಬೇರೆ ದೇಶಗಳು ಒಪ್ಪಿ ಸಹಿ ಹಾಕಿವೆ. ಆದರೆ ಅದಕ್ಕೆ ಕಾನೂನಿನ ನಿರ್ಬಂಧ ಇಲ್ಲ. ಒಂದು ಮಟ್ಟದ ನೈತಿಕ ಮೌಲ್ಯ ಇದೆ. ವಿಶ್ವಸಂಸ್ಥೆಯ ಮಾನವಹಕ್ಕುಗಳ ಆಯೋಗಕ್ಕೆ ಯಾವುದೇ ನಾಗರಿಕ ಸಮಾಜ ದೂರನ್ನು ನೀಡಬಹುದು. ದೂರನ್ನು ಆಧರಿಸಿ ಆಯಾ ದೇಶದ ಪ್ರತಿನಿಧಿಗಳನ್ನು ವಿಶ್ವಸಂಸ್ಥೆ ಕೇಳುತ್ತದೆ. ಜಾಗತಿಕ ವೇದಿಕೆಯಲ್ಲಿ ಒಂದು ದೇಶದ ಆಂತರಿಕ ವಿಷಯ ಚರ್ಚೆಗೆ ಬಂದರೆ, ಆ ದೇಶ ಎಚ್ಚೆತ್ತುಕೊಂಡು ತನ್ನ ಉತ್ತರವನ್ನು ನೀಡುತ್ತದೆ. ಭೇದ ನೀತಿ ವಿರೋಧಿಸುವುದು ಒಂದು ಮೌಲ್ಯ. ಈ ಕಾರಣಕ್ಕೆ ಬೇರೆ ಬೇರೆ ದೇಶಗಳೂ ಅನ್ಯದೇಶಗಳ ಮಾನವ ಹಕ್ಕುಗಳನ್ನು ಗಮನಿಸುತ್ತಿರುತ್ತವೆ.

◆ **ವರ್ಗ–ವರ್ಣ ತಾರತಮ್ಯದಲ್ಲಿ ಜ್ಞಾನವನ್ನು ಗಳಿಸಲು ಭಾರತದಲ್ಲಿ ಏನೇನು ಪರಿಕರಗಳು ಸಿಕ್ಕವು?**

ಶಾಲಾ ದಿನಗಳಲ್ಲಿಯೇ ನನಗೆ ವಿಜ್ಞಾನಕ್ಕಿಂತ ಮಾನವೀಯ ಅಧ್ಯಯನಗಳ ಬಗ್ಗೆ ಆಸಕ್ತಿ ಹೆಚ್ಚಿತ್ತು. ಜಾತಿ ವಿರೋಧಿ ಚಳವಳಿ, ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳಲ್ಲಿ ಪ್ರೀತಿ ಇತ್ತು. ನನ್ನ ಪೋಷಕರು ಅಂಬೇಡ್ಕರ್‌ವಾದಿಗಳಾದುದರಿಂದ ಅದರ ದಟ್ಟ ಪ್ರಭಾವ ಮನೆಯಲ್ಲೇ ಸಿಕ್ಕಿದೆ. ಸ್ವತಃ ದಲಿತಳಾಗಿರುವುದರಿಂದ ಆ ತಾರತಮ್ಯವನ್ನು ಹತ್ತಿರದಿಂದ ಕಂಡಿದ್ದೇನೆ. ದಲಿತ ಅನ್ನುವ ಕಾರಣಕ್ಕೆ ಅವಕಾಶವನ್ನು ತಪ್ಪಿಸುವ ಹುನ್ನಾರಗಳನ್ನೂ ಮನಗಂಡಿದ್ದೇನೆ. ಶೈಕ್ಷಣಿಕವಾಗಿ ಅಧ್ಯಯನ ಮಾಡುವಾಗ ಜಾತಿ, ವರ್ಣ, ಲಿಂಗದ ಬಗ್ಗೆ ಒತ್ತುಕೊಟ್ಟಿದ್ದೇನೆ. ಎಂ.ಎ. ಸಂಶೋಧನಾ ನಿಬಂಧವನ್ನು 'ಜಾತಿ ಮತ್ತು ಭೂಮಾಲೀಕತ್ವಕ್ಕೆ' ಸಂಬಂಧಿಸಿದಂತೆ ರೂಪಿಸಿದ್ದೆ. ಅದರಲ್ಲಿ ಕರ್ನಾಟಕದಲ್ಲಿ ಭೂ ಸುಧಾರಣೆ, ಅದರಿಂದ ದಲಿತ ಸಮುದಾಯಕ್ಕೆ ಆದ ಸಹಾಯದ ಬಗ್ಗೆ ನೋಡಿದ್ದೆ. ಪಿಎಚ್.ಡಿ.ಯನ್ನು 'ಮಾನವ ಹಕ್ಕುಗಳು ದಲಿತರಿಗೆ ದಕ್ಕಿದೆಯೇ' ಎನ್ನುವ ಪ್ರಶ್ನೆಯನ್ನು ಇಟ್ಟುಕೊಂಡು ಮಾಡಿದ್ದೆ. ದಕ್ಷಿಣ ಏಷ್ಯಾ ವ್ಯಾಪ್ತಿಯಲ್ಲಿ ಭಾರತ ಮತ್ತು ನೇಪಾಳವನ್ನು ತೌಲನಿಕವಾಗಿ ಇಟ್ಟುಕೊಂಡಿದ್ದೆ. ನನ್ನ ಆಸಕ್ತಿಯ ಅಧ್ಯಯನ ಮತ್ತು ಅಧ್ಯಾಪಕಿಯಾಗಿ ಕಾಲೇಜಿನಲ್ಲಿ ಭಾರತ ಸಂವಿಧಾನ, ರಾಜಕೀಯ ವ್ಯವಸ್ಥೆ ಬಗ್ಗೆ ಪಾಠ ಮಾಡುತ್ತಿದ್ದೆ. ಈ ಎಲ್ಲ ಕಾರಣದಿಂದ ನನ್ನ ವಿಷಯದ ಮೇಲೆ ಹಿಡಿತ ಸಾಧಿಸಿದ್ದೇನೆ.

◆ **ನಿಮ್ಮ ಅಧ್ಯಯನದ ಹಿನ್ನೆಲೆಯಲ್ಲಿ ಭಾರತದ ದಲಿತ ಮಹಿಳೆಯನ್ನು ಹೇಗೆ ಗುರುತಿಸಿದ್ದೀರಿ?**

ದಲಿತವಾದ ಅಥವಾ ಸ್ತ್ರೀವಾದದ ಚಳವಳಿಗಳು ಇತ್ತೀಚಿನ ದಿನಗಳತನಕ ಆಂತರಿಕವಾಗಿ ಕೆಲವು ಸೂಕ್ಷ್ಮಗಳನ್ನು ಗಮನಿಸಿರಲಿಲ್ಲ. ದಲಿತ ಮಹಿಳೆಯ ಹೋರಾಟ 'ಒಬಿಸಿ' ಮಹಿಳೆಗಿಂತ ಬೇರೆ ಇರುತ್ತದೆ. ಅದೇ ದಲಿತ ಮಹಿಳೆಗಿಂತ ಆದಿವಾಸಿ ಮಹಿಳೆಯ ಬದುಕು ಭಿನ್ನವಾಗಿರುತ್ತದೆ. 30 ವರ್ಷಗಳಿಂದ ಈಚೆಗೆ ಈ ರೀತಿಯೂ ಅಧ್ಯಯನ ವಿಸ್ತಾರಗೊಂಡಿದೆ. ದಲಿತ ಮಹಿಳೆಯರೂ ಓದು ಬರಹದಲ್ಲಿ ತೊಡಗಿಕೊಂಡಿದ್ದಾರೆ. ಒಳ್ಳೆಯ ಸ್ಥಾನಮಾನದಲ್ಲಿ ಇದ್ದಾರೆ. ಆದರೆ ಅವರ ಪ್ರಾತಿನಿಧ್ಯದಲ್ಲಿ ಕೊರತೆ ಎದ್ದು ಕಾಣುತ್ತದೆ. ಆ ಕೊರತೆ, ಚಳವಳಿ ಇರಬಹುದು, ಅಧಿಕಾರ ಇರಬಹುದು, ಎಲ್ಲೆಡೆಯೂ ಇದೆ. ದಲಿತ ಮಹಿಳೆಯನ್ನು ಜಾತಿ ಮಾತ್ರವಲ್ಲದೆ ಲಿಂಗ ವ್ಯವಸ್ಥೆಯೂ ಹತ್ತಿಕ್ಕಿದೆ. ಅಂತೆಯೇ ಪ್ರಾದೇಶಿಕ ಅಸಮಾನತೆ, ಗ್ರಾಮ, ನಗರಗಳ ನಡುವಿನ ತಾರತಮ್ಯ, ಸೌಲಭ್ಯ ಕಾರಣ ಆಗಿರುತ್ತವೆ. ದಲಿತರಿಗೆ ದೊರೆತಿರುವ ಒಂದಿಷ್ಟು ಅವಕಾಶಕ್ಕೆ ಮೀಸಲಾತಿಯಿಂದ ಸಹಾಯ ಆಗಿದೆ. ಸಮಾನ ಪ್ರಾತಿನಿಧ್ಯಕ್ಕೆ ಇನ್ನೂ ಹೆಚ್ಚಿನ ಯೋಚನೆ ಮಾಡಬೇಕಿದೆ. ಈ ಕಾರಣಕ್ಕೆ ಎಲ್ಲ ಹೆಣ್ಣುಮಕ್ಕಳನ್ನು ಒಂದೇ ಸೂರಿನ ಅಡಿ ನೋಡಲು ಆಗುವುದಿಲ್ಲ. ಸಾವಿರಾರು ವರ್ಷಗಳ ಜಾತಿ ತಾರತಮ್ಯ ಹೋಗಲಾಡಿಸಲು ನೂರಾರು ವರ್ಷಗಳೇ ಬೇಕಾಗುತ್ತವೆ.

ಪ್ರತಿಕ್ರಿಯಿಸಿ: feedback@sudha.co.in



ತಂದೆ ಪ್ರಸನ್ನ ಕುಮಾರ್, ತಂಗಿ ಡಾ. ಮೋನಿಕಾ, ತಾಯಿ ಜಯಮ್ಮ ಅವರ ಜೊತೆ ಅಶ್ವಿನಿ

## ದಕ್ಷಿಣದಲ್ಲಿ ವೈಚಾರಿಕ ಎಚ್ಚರ

ದಕ್ಷಿಣ ಭಾರತ ಪ್ರಗತಿಪರ ಚಿಂತನೆಗೆ ತೆರೆದುಕೊಂಡಿದೆ. ಇಲ್ಲಿ ಜಾತಿಭೇದ ವಿರೋಧಕ್ಕೆ ದೀರ್ಘ ಪರಂಪರೆ ಇದೆ. ಅದಕ್ಕೆ ಪೂರಕವಾಗಿ ಆಧುನಿಕ ಶಿಕ್ಷಣ ಕೂಡ ನೆರವು ನೀಡಿದೆ. ರಾಜ್ಯದಲ್ಲಿ 12ನೇ ಶತಮಾನದ ಶರಣ ಚಳವಳಿ ಈ ಬಗ್ಗೆ ಮಾತನಾಡಿದೆ. ಅದು ನಮ್ಮ ಸಮಾಜವನ್ನು ಪ್ರಭಾವಿಸಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಾವು ಒಂದಿಷ್ಟು ಪ್ರಗತಿ ಸಾಧಿಸಿದ್ದೇವೆ. ಅಲ್ಲದೆ ಶೋಷಿತ ವರ್ಗಗಳ ವಿಮೋಚನೆಗೆ ಪೆರಿಯಾರ್–ಅಂಬೇಡ್ಕರ್‌ವಾದಿ ಚಳವಳಿ ಸಹಕರಿಸಿವೆ. ಭಾರತವನ್ನು ನೇಪಾಳ ತುಂಬ ವಿಷಯದಲ್ಲಿ ಅನುಕರಿಸುತ್ತದೆ. ಅಲ್ಲಿನ ಸಂವಿಧಾನ ಸೇರಿದಂತೆ ಸರ್ಕಾರದ ನೀತಿ ನಿರೂಪಣೆ ಕೂಡ ಭಾರತಕ್ಕೆ ಹತ್ತಿರವಾಗಿದೆ. 2009ರಲ್ಲಿ ರೂಪಿತವಾದ ನೇಪಾಳ ಸಂವಿಧಾನಕ್ಕೆ ಭಾರತ ಸಹಾಯ ಮಾಡಿದೆ.